ಹಿಂಡಲದಂತಹ ಆಕಳು ಕೆಚ್ಚಲಿಗೆ ನೀರು ಗೊಜ್ಜಿ ಗೊಜ್ಜಿ ಹಾಲು ಹಿಂಡಕೊಂಡು ಬರಬೇಕು. ಯಪ್ಪಾ, ರಾತ್ರಿ ಹಾಸಿಗೆಗೆ ಮೈ ಹತ್ತೂದ ತಡಾ, ಬಡದ ಒಗೆದಂಗ ನಿದ್ದಿ ಬರತಿತ್ತು. ಅಂತಹದರಾಗ ನನಗ ಹೆಂಗ ಮಕ್ಕಳಾದವು ಅನ್ನೋದು ಗೊತ್ತೇ ಆಗಲಿಲ್ಲ.' ನೀಲವ್ವನ ಮಾತಿಗೆ ಎಲ್ಲರೂ ಬಿದ್ದು ಬಿದ್ದು ನಕ್ಕರು.

ಮನೆಯಲ್ಲಿ ಯಾವಾಗಲೂ ಹತ್ತಾರು ಮಂದಿ. ತಮ್ಮನ್ನು ಏಕಾಂತದಲ್ಲಿರಲು ಯಾರೂ ಬಿಡಲಿಲ್ಲ. ಏಕಾಂತದಲ್ಲಿರಲು ಅವಕಾಶ ಕೊಟ್ಟರೆ ಹೆಂಡತಿಗೆ ಬಹಳ ಸ್ವಾತಂತ್ರ್ಯ ಕೊಟ್ಟಂತಾಗುತ್ತದೆ ಎಂದು ಅತ್ತೆ ಹೇಳುತ್ತಿದ್ದಳು. ಆದರೆ ಮಲ್ಲವ್ವತ್ತೆಯ ಪುರಾಣ ಬೇರೆ. ಗಂಡಹೆಂಡತಿಯರು ಸುಖದಿಂದಿದ್ದರೆ ಅವಳಿಗೆ ಹೊಟ್ಟೆಕಿಚ್ಚು. ಅದಕ್ಕಾಗಿಯೆ ಆಕೆಯ ಮಗ ಇದೇ ಊರಲ್ಲಿದ್ದರೂ ಬೇರೆ ಮನೆ ಮಾಡಿದ್ದಾನೆ. 'ನನ್ನ ಮಗನ್ನ ನುಂಗಿ ನೀರು ಕುಡಿದಾಕಿ' ಎಂದು ಸೊಸೆಯನ್ನು ದಿನಕ್ಕೆ ಒಂದು ಸಲವಾದರೂ ಹೇಳದಿದ್ದರೆ ಆಕೆಗೆ ತಿಂದ ಆಹಾರ ಪಚನವಾಗುತ್ತಿರಲಿಲ್ಲ! ಮಗ, ಸೊಸೆಯರ ಮೇಲಿನ ಸಿಟ್ಟನ್ನು ದೇವಪ್ಪ ಮತ್ತು ಅನಸವ್ವಳ ಮೇಲೆ ತೀರಿಸಿಕೊಳ್ಳುತ್ತಿದ್ದಾಳೆ. ಅವರಿಬ್ಬರು ಸೆರೆ ಕುಡಿದಿರುವ ಮಂಗಗಳ ಹಾಗೆ ಆಡುತ್ತಾರೆಂದು ಬಾವಿಕಟ್ಟೆಯ ಮೇಲೆ ಹೇಳುತ್ತ ಮಂದಿಗೆ ಅವರ ಪ್ರೇಮ ಪ್ರಣಯದ ಬಗ್ಗೆ ಕೌತುಕ ಹೆಚ್ಚಾಗುವಂತೆ ಮಾಡಿದಳು.

'ದೇವ್ಯಾ ಮತ್ತು ಅನಸವ್ವ ಅದಾರಲ್ಲ, ಅವರೆಡೂ ಪ್ರೇಮ ಪಿಶಾಚಿಗಳು, ಇವಕ್ಕೇನು ನಾಚಿಕಿ, ಮಾನ, ಮರ್ಯಾದಿ ಐತಿಲ್ಲೊ? ಜೀವನಾದಾಗ ಮಕ್ಕೋದು ಬಿಟ್ಟು ಬ್ಯಾರೆ ಐತಿಲ್ಲೋ? ರಾತ್ರಿಯಿಡೀ ತಬ್ಬಿಕೊಂಡು ಬಿದ್ದಿರತಾವು. ಅವುಗಳ ಮಾತೇ ಮುಗಿಯಂಗಿಲ್ಲ. ರಾತ್ರಿ ನಿದ್ದಿಗೆಡ್ತಾವ. ಹಗಲಿಗ ಚಾದಂಗಡಿಯೊಳಗ ತೂಕಡಿಸತಿರತಾವು. ನೀವು ನೋಡಿರಿಲ್ಲ?' ದೇವಪ್ಪನನ್ನು ಕಂಡರೆ ಅಸಹ್ಯ ಪಡುತ್ತಿದ್ದ ಅನುಸೂಯೆ ಕಾಲಕ್ರಮೇಣ ಅವನನ್ನು ಅಷ್ಟು ಪ್ರೇಮಿಸುವಂತಹವಳಾಗುತ್ತಾಳೆಂದು ಯಾರು ತಿಳಿದಿದ್ದರು? ಅವರ ಪ್ರೇಮದಲ್ಲಿ ಯಾರು ಬಾಗಿದರು? ಯಾರು ಬಳುಕಿದರು? ಯಾರು ಬದಲಾವಣೆಗೆ ಒಳಗಾದರು? ಯಾರು ಎಷ್ಟೊಂದು ಹೊಂದಿಕೊಂಡರು? ಒಬ್ಬರು ಹೆಚ್ಚೊ? ಒಬ್ಬರು ಕಡಿಮೆಯೊ? ದೇವಪ್ಪ ಹೆಂಡತಿಯ ಗುಲಾಮನಾಗಿದ್ದಾನೆ. ಮಂದಿ ಮಾತಾಡಿಕೊಳ್ಳುತ್ತಿದ್ದರು. ಗಂಡು ಮಗ ಹೀಗೆ ಹೆಂಡತಿಯ ಸೆರಗು ಹಿಡಿದು, ಅವಳನ್ನು ಸದಾ ಖುಷಿಪಡಿಸುವುದರಲ್ಲಿಯೇ ನಿರತನಾದರೆ ಲೋಕ ಸ್ವಲ್ಪ ದಿನಗಳಲ್ಲಿಯೇ ಮುಳುಗಿ ಹೋಗುವುದೆಂದು ಕೆಲವು ತಾಯಂದಿರು ತಮ್ಮತಮ್ಮಲ್ಲಿ ಆತಂಕಪಡುವರು.

'ಈ ದೇವಪ್ಪಗ ಬಂದು ತಳಾ ಊರಲಿಕ್ಕೆ ನಮ್ಮೂರೆ ಬೇಕಾಗಿತ್ತೇನು? ಬ್ಯಾರೆ ಊರು ಸಿಗಲಿಲ್ಲೇನು? ಹೋಗಿ ಹೋಗಿ ಅಂವನ್ನ ನಾವು ಮೊದಮೊದಲು ಬಾಳ ಹಚ್ಚಿಗೊಂಡು ತಲೆ ಮ್ಯಾಲೆ ಏರಿಸಿಕೊಂಡ್ವಿ. ಹಗ್ಗ ಕೊಟ್ಟು ಕೈ ಕಟ್ಟಿಸಿಕೊಂಡೇವಿ. ಈಗ ಅನುಭವಿಸಬೇಕಾಗೇತಿ. ಈ ಅನುಸೂಯಿಯದು ಬಾಳ ಆಗೇತಿ. ಆಕೀಗಿ ಈ ಸಂತಿಪ್ಯಾಟಿ ಯಾಕ ಬೇಕಾಗೇತಿ? ಗಂಡ ಎಲ್ಲಾ ರುಚಿ ಹಚ್ಚಿಸಿದ. ಎಲ್ಲಾ ಸಂತಿಪ್ಯಾಟಿ ತಾನೇ ಮಾಡ್ತಾ ಇದಾಳಂತ. ಹೊಸ ಹೊಸ ಅರಿವಿಅಂಚಡ, ಹಣಿಗಿಬಾಚಣಿಗಿ, ರಬ್ಬರುಕ್ಲಿಪ್ಪು ಅಂತ ಹೆಣ್ಣುಮಕ್ಕಳಿಗೆಲ್ಲ ಹೊಸ ಹೊಸ ಆಸೆ ಹುಟ್ಟಿಸಲಿಕ್ಕೆ ಹತ್ತಿದಾಳ.'

ಅನಸವ್ವ ಅಷ್ಟೊಂದು ಚತುರೆಯಾಗುತ್ತಾಳೆಂದು ಯಾರು ಎಣಿಸಿದ್ದರು? ಅವಳ ನಿಪುಣತೆಯನ್ನು ಈಗ ದೇವಪ್ಪನಿಂದ ಹಿಡಿದು ಎಲ್ಲರೂ ಮೆಚ್ಚಿಕೊಳ್ಳುವವರೆ. ಮಲ್ಲೂರಿನ ಬಗ್ಗೆ ಅವಳಿಗೆ ಇಷ್ಟೊಂದು ಕೂಲಂಕಷವಾದ ಅರಿವು ಬಂದಿದ್ದಾದರೂ ಹೇಗೆ? ಈ ರೂಪಾಂತರ ಅವಳಿಂದ ಹೇಗೆ ಸಾಧ್ಯವಾಯಿತು? ಮಲ್ಲೂರಿನ ಹೊಟೇಲು ತಾವು ನೋಡನೋಡುತ್ತಿದ್ದಂತೆಯೆ ಹೊಸತನ ಹಾಗೂ ನಾವೀನ್ಯತೆಗೆ ಹೇಗೆ ಒಳಗಾಯಿತು? ಹೊರಗಿನ ಮತ್ತು ಒಳಗಿನ ನೋಡುವಿಕೆಯಲ್ಲಿ ದೇವಪ್ಪನ ಹೊಟೇಲು ಬದಲಿಯಾಗಿರುವದಂತೂ ಸತ್ಯ. ಅದು ನಿಜವಾಗಿಯೂ ಬದಲಿಯಾಗಿದೆಯೋ ಅಥವಾ ತಮಗೆ ಹಾಗೆ ಕಾಣಿಸುತ್ತಿದೆಯೋ? ಹೊಟೇಲ್ ಮಾತ್ರ ಬದಲಿಯಾಗಿದೆಯೋ ಇಲ್ಲವೆ ಹೊಟೇಲಿನ ಜೊತೆ ಊರು ಕೂಡ ಬದಲಿಯಾಗಿದೆಯೆ? ತಮ್ಮೂರಿಗೆ

